ದಿನಾಂಕಃ 16-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ವಾದಿ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ-**

1 ನೇ ಪ್ರತಿವಾದಿಗೆ ಈಗ 65 ವರ್ಷ ವಯಸ್ಸಾಗಿರುತ್ತದೆ. ಅವರು ವ್ಯವಸಾಯ ಮಾಡುತ್ತಾರೆ. ಅದನ್ನು ಹೊತರುಪಡಿಸಿದ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ಅವರಿಗೆ ಆರೋಗ್ಯ ಸರಿ ಇರುವುದಿಲ್ಲ. ಅವರು ಕ್ಯಾನ್ಸರ್ ನಿಂದ ಬಳಲುತ್ತಿದ್ದಾರೆ. ಈ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯ ಸರ್ವೆ ನಂಬರ್ 210 ಆಗಿರುತ್ತದೆ. ಈ ಕೇಸಿನ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇದೆ. ವಾದಿ ದಾವಾ ಆಸ್ತಿಯನ್ನು ಖರೀದಿಸಿರುವ ಬಗ್ಗೆ ನನಗೆ ಮಾಹಿತಿ ಇದೆ. ಆ ಕ್ರಯ ಪತ್ರದಂತೆ ದಾವಾ ಆಸ್ತಿಯ ದಾಖಲೆಗಳು ವಾದಿಯ ಹೆಸರಿನಲ್ಲಿವೆ.. ದಾವಾ ಆಸ್ತಿಗೆ ವಾದಿಯೇ ಮಾಲೀಕರು ಎಂಬ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ನನಗೆ ಈ ಆಸ್ತಿಗೆ ಸಂಬಂಪಟ್ಟಂತೆ ಪ್ರಕರಣ ನಡೆಸಲು ಮಾತ್ರ ಸಾಮಾನ್ಯ ಅಧಿಕಾರ ಪತ್ರವನ್ನು 1 ನೇ ಪ್ರತಿವಾದಿ ಬರೆದುಕೊಟ್ಟಿರುತ್ತಾರೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯನ್ನು ಹೊರತುಪಡಿಸಿ ಇನ್ನೂ ಬೇರೆ ಆಸ್ತಿಗಳು ಇವೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಿ 1 ನೇ ಪ್ರತಿವಾದಿಗೆ ದಿಃ 26.03.2014 ರಂದು ಬರೆದುಕೊಟ್ಟ ಸಾಮಾನ್ಯ ಅಧಿಕಾರ ಪತ್ರದ ಬಗ್ಗೆ ನನಗೆ ಮಾಹಿತಿ ಇದೆ. ಆ ಅಧಿಕಾರ ಪತ್ರ ಬರೆದುಕೊಡುವ ಸಮಯದಲ್ಲಿ ನಾನು ಸಹ ಆ ಸ್ಥಳದಲ್ಲಿದ್ದೆನು. ಆ ಅಧಿಕಾರ ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿಲ್ಲ ಆ ಸಾಮಾನ್ಯ ಅಧಿಕಾರ ಪತ್ರದಲ್ಲಿ ಹೇಳಲಾದ ಷರತ್ತುಗಳ ಬಗ್ಗೆ ತಿಳಿದುಕೊಂಡಿರುತ್ತೇನೆ . ಆ ಸಾಮಾನ್ಯ ಅಧಿಕಾರ ಪತ್ರದಲ್ಲಿ ನಮೂದಿಸಲಾದ

1 ನೇ ಷರತ್ತು ನನಗೆ ಗೊತ್ತು. ಆನಂತರ ಸಾಕ್ಷಿಯು ಕೆಲವು ಷರತ್ತುಗಳು ಮಾತ್ರ ಗೊತ್ತು ಎಂದು ಸ್ವತಃ ನುಡಿಯುತ್ತಾರೆ.

ಆ ಸಾಮಾನ್ಯ ಅಧಿಕಾರ ಪತ್ರದ 1 ನೇ ಷರತ್ತಿನ ಪ್ರಕಾರ 1 ನೇ ಪ್ರತಿವಾದಿ ಸಾಮಾನ್ಯ ಅಧಿಕಾರ ಪತ್ರದಂತೆ ಆ ಅಧಿಕಾರ ಪತ್ರದಲ್ಲಿ ನಮೂದಿಸಿದ ಆಸ್ತಿಯನ್ನು ತನ್ನ ಹೆಸರಿಗೆ ಆ ಸಾಮಾನ್ಯ ಅಧಿಕಾರ ಪತ್ರದಂತೆ ತನ್ನ ಹೆಸರಿಗೆ ಮಾರಾಟ ಮಾಡಿಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ವಾದಿಗೆ ಈ ಸಾಮಾನ್ಯ ಅಧಿಕಾರ ಪತ್ರದ ಪ್ರಕಾರ ಸಂಪೂರ್ಣ ಹಣ ಕೊಟ್ಟಿದ್ದಾರೆ ಎಂದರೆ ಸರಿ . ಆ ಸಾಮಾನ್ಯ ಅಧಿಕಾರ ಪತ್ರದ ಪ್ರಕಾರ ರೂ.4,00,000/- ನಗದು ಹಣ ಪಡೆದುಕೊಂಡಿರುತ್ತಾರೆ. ಈ ಬಗ್ಗೆ ಸಾಮಾನ್ಯ ಅಧಿಕಾರ ಪತ್ರದಲ್ಲಿ ಬರೆಯಲಾಗಿರುತ್ತದೆ ಆ ಮೂಲ ಸಾಮಾನ್ಯ ಅಧಿಕಾರ ಪತ್ರ ಕಳೆದುಹೋಗಿರುತ್ತದೆ ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ನೀಡಲಾಗಿತ್ತು ಮತ್ತು ಪತ್ರಿಕೆಯಲ್ಲೂ ಸಹ ಪ್ರಕರಣೆ ಹೊರಡಿಸಲಾಗಿರುತ್ತದೆ. ಈ ಬಗ್ಗೆ ದೂರಿನ ಪ್ರತಿ, ಪ್ರ.ವ.ವರದಿ ಮತ್ತು ಪತ್ರಿಕಾ ಪ್ರಕರಣಾ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ಸಾಮಾನ್ಯ ಅಧಿಕಾರ ಪತ್ರದಲ್ಲಿ ರೂ.4,00,000/- ಹಣ ಕೊಟ್ಟ ಬಗ್ಗೆ ಬರೆದಿರುವುದಿಲ್ಲ. ಆ ಸಾಮಾನ್ಯ ಅಧಿಕಾರ ಪತ್ರದಲ್ಲಿ ನಮೂದಿಸಲಾದ ರೂ.3,95,000/- ಹಣ ಆ ಆಸ್ತಿಯ ಮೌಲ್ಯವಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕ್ರಯ ಪತ್ರ ಮಾಡಿಕೊಂಡ ಸಮಯದಲ್ಲಿ ನಾನು ಸಹ ಆ ಸ್ಥಳದಲ್ಲಿ ಇದ್ದೆನು. ಆ ಕ್ರಯ ಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ಆ ಕ್ರಯ ಪತ್ರಕ್ಕೆ ಅಶೋಕ ರೆಡ್ಡಿ ಮತ್ತು ದಶರಥ ರಾಮ ನಾಯ್ಡುರವರು ಸಹಿ ಮಾಡಿರುತ್ತಾರೆ ಆ

ಕ್ರಯ ಪತ್ರವನ್ನು ಜುಲೈ 2015 ರಂದು ಬರೆಯಲಾಗಿರುತ್ತದೆ ಆದರೆ ದಿನಾಂಕ ಈಗ ನನಗೆ ನೆನಪಿಲ್ಲ. ಆ ಕ್ರಯ ಪತ್ರ ಸರ್ವೆ ನಂಬರ್ 210 ರ ವಿಸ್ತೀರ್ಣ 3 ಎಕರೆ 30 ಗುಂಟೆಗೆ ಬರೆಯಲಾಗಿರುತ್ತದೆ. ಆ ಆಸ್ತಿಯ ಚಕ್ಕುಬಂಧಿ ನನಗೆ ಗೊತ್ತಿಲ್ಲ. ದಾವಾ ಜಮೀನನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಯ ಅಕ್ಕ ಪಕ್ಕದಲ್ಲಿ ಇರುವ ಜಮೀನಿನ ಮಾಲೀಕರ ಹೆಸರುಗಳು ನನಗೆ ಗೊತ್ತಿಲ್ಲ.

ಆ ಕ್ರಯ ಪತ್ರ ಬರೆಯುವ ಸಮಯದಲ್ಲಿ ನಾನು 1 ನೇ ಪ್ರತಿವಾದಿ, ಅಶೋಕ ರೆಡ್ಡಿ ಮತ್ತು ದಶರಥ ರಾಮ ನಾಯ್ಡುರವರನ್ನು ಹೊರತುಪಡಿಸಿದ ಬೇರೆ ಯಾರೂ ಸಹ ಇರಲಿಲ್ಲ. ಆ ಕ್ರಯ ಪತ್ರವನ್ನು ರೂ.8,90,000/- ಕ್ರಯದ ಹಣಕ್ಕೆ ಬರೆದುಕೊಡಲಾಯಿತು ಆ ಹಣವನ್ನು 1 ನೇ ಪ್ರತಿವಾದಿ ಪಡೆದು ನೊಂದಣಿ ಶುಲ್ಕಕ್ಕೆ ಕಟ್ಟಿರುತ್ತಾರೆ. ವಾದಿಗೆ ಆ ಹಣವನ್ನು ಸಾಮಾನ್ಯ ಅಧಿಕಾರ ಪತ್ರ ಬರೆದುಕೊಟ್ಟ ದಿನವೇ ನೀಡಲಾಗಿತ್ತು ಆ ಕ್ರಯ ಪತ್ರದಲ್ಲಿ ಸಾಮಾನ್ಯ ಅಧಿಕಾರ ಪತ್ರ ಬರೆದುಕೊಟ್ಟ ದಿನದಂದೇ ಕ್ರಯದ ಹಣವನ್ನು ವಾದಿಗೆ ನೀಡಲಾಗಿರುತ್ತದೆ ಎಂದು ಬರೆದಿದ್ದಾರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆ ಕ್ರಯ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಆದರೆ ಕ್ರಯ ಪತ್ರ ಮಾಡಲಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. 1 ನೇ ಪ್ರತಿವಾದಿ ಮಾಡಿಕೊಂಡ ಈ ಕ್ರಯಪತ್ರದ ಬಗ್ಗೆ ವಾದಿಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ವಿಚಾರವನ್ನು ವಾದಿಗೆ ಯಾರು ತಿಳಿದರು ಎಂದರೆ, ಸಾಕ್ಷಿಯು ನಾವೆಲ್ಲರೂ ಜೊತೆಯಲ್ಲೇ ಇದ್ದ ಕಾರಣ ಮತ್ತು ಅವರ ಪಿ.ಎ. ಆಗಿದ್ದ ಅಶೋಕ ರೆಡ್ಡಿರವರು ತಿಳಿಸಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ಆ ಕ್ರಯ

ಪತ್ರವನ್ನು ಅಶೋಕರೆಡ್ಡಿರವರೇ ಸಿದ್ಧಪಡಿಸಿದರು. ಅವರೇ ಆ ಕ್ರಯಪತ್ರವನ್ನು ತಯಾರಿಸಿದ ನಂತರ ನಾವುಗಳೆಲ್ಲರೂ ಕೂಡಿ ಆ ಕ್ರಯ ಪತ್ರವನ್ನು ನೊಂದಣಿ ಮಾಡಿಸಿದೆವು. ಈ ಕ್ರಯ ಪತ್ರದ ಬಗ್ಗೆ ವಾದಿಗೆ ಯಾವುದೇ ಮಾಹಿತಿ ಕೊಡದೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ ಆ ಕ್ರಯ ಪತ್ರದಲ್ಲಿ ನಮೂದಿಸಲಾದ ರೂ8,90,000/- ವಾದಿಗೆ ತಲುಪಿರುವುದಿಲ್ಲ ಎಂದರೆ, ಸಾಕ್ಷಿಯು ಆ ದಿನ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ಕ್ರಯದ ಹಣ ವಾದಿಗೆ ಸಂದಾಯವಾದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ಆ ಕ್ರಯ ಪತ್ರದ ಪ್ರಕಾರ 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಹಸ್ತಾಂತರವಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಡಿ.4 ರಂತಹ ದಾನಪತ್ರ ಮಾಡಲಾದ ದಿನಾಂಕದಂದು ನಾನು ಆ ಸ್ಥಳದಲ್ಲಿದ್ದೆನು ಆ ದಾನಪತ್ರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿದ್ದೇನೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆ ದಾನಪತ್ರವನ್ನು ಯಾರು ಬರೆದರು ಎಂಬುದು ಈಗ ನನಗೆ ನೆನಪಿಲ್ಲ. ಆ ದಾನಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತು. 1 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ 2 ನೇ ಪ್ರತಿವಾದಿಗೆ ದಾನಪತ್ರ ಬರೆದುಕೊಡುವ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆ ಸಾಮಾನ್ಯ ಅಧಿಕಾರ ಪತ್ರದ ಪ್ರಕಾರ 1 ನೇ ಪ್ರತಿವಾದಿ ದಾವಾ ಆಸ್ತಿಯ ಅನ್ಯಸಂಕ್ರಮಣ ಮಾಡಿಸುವ ಮತ್ತು ಖಾತೆಯನ್ನು ಬದಲಾವಣೆ ಮಾಡಿಸುವ ಕೆಲಸ ಮಾಡಿರುತ್ತಾರೆ. 2014 ರಿಂದ 2021 ರವರೆಗೆ ದಾವ ಆಸ್ತಿ 1 ನೇ

ಪ್ರತಿವಾದಿಯ ಹೆಸರಿನಲ್ಲಿತ್ತು. ಈ ಬಗ್ಗೆ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿಯ ಹೆಸರಿಗೆ ದಾವಾ ಆಸ್ತಿಯ ಖಾತಾ ಬದಲಾವಣೆ ಆದ ನಂತರ ಈ ವ್ಯಾಜ್ಯ ಉಂಟಾಯಿತು ಎಂದರೆ ಸರಿ. 1 ನೇ ಪ್ರತಿವಾದಿ ಸಾಮಾನ್ಯ ಅಧಿಕಾರ ಪತ್ರ ಆದ ನಂತರ ದಾನಪತ್ರ ಆಗುವವರೆಗೆ ದಾವಾ ಆಸ್ತಿಯ ಎಲ್ಲಾ ಕೆಲಸ ಕಾರ್ಯಗಳನ್ನು ಜಿ.ಪಿ.ಎ. ಆಗಿ ನಿರ್ವಹಿಸಿರುತ್ತಾರೆ ಎಂದರೆ ಸರಿ. ಪ್ರಾಸಾ.3 ರವರ ಪರಿಚಯ ನನಗೆ ಇಲ್ಲ. ಪ್ರಾಸಾ.3 ರವರು ವಾದಿಯು ದಾವಾ ಆಸ್ತಿಯನ್ನು ಖರೀದಿಸಿದ ದಿನಾಂಕದಿಂದ ಸೆಕ್ಯೂರಿಟಿಯಾಗಿ ದಾವಾ ಆಸ್ತಿಯ ಬಳಿ ಇದ್ದಾರೆ ಎಂದರೆ ಸರಿಯಲ್ಲ. 2021-22 ನೇ ಸಾಲಿನಲ್ಲಿ 2 ನೇ ಪತಿವಾದಿ ದಾವಾ ಆಸ್ತಿಯ ಬಳಿ ಬಂದು ಗಲಾಟೆ ಮಾಡಿದ ವಿಚಾರವನ್ನು ಪ್ರಾಸಾ.3 ರವರು ವಾದಿಗೆ ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ 1 ನೇ ಪ್ರತಿವಾದಿ ಕ್ರಯ ಪತ್ರ ಮಾಡಿಸಿಕೊಂಡಿರುವ ವಿಚಾರ ವಾದಿಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪ್ಯಾರಾ 16 ರಲ್ಲಿ ವಾದಿ 1 ನೇ ಪ್ರತಿವಾದಿಯಿಂದ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಂತ ಹಂತವಾಗಿ ಹಣ ಪಡೆದುಕೊಂಡಿದ್ದಾರೆ ಎಂದರೆ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆನಂತರ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ 1 ನೇ ಪ್ರತಿವಾದಿಯಿಂದ ವಾದಿ ಹಣ ಪಡೆದು ನಿಗಧಿತ ಸಮಯಕ್ಕೆ ಕ್ರಯ ಪತ್ರ ಬರೆದುಕೊಡದೇ ಒಂದಲ್ಲ ಎಂದು ಕಾರಣ ನೀಡಿ ಮುಂದೂಡುತ್ತಾ ಬಂದಿರುತ್ತಾರೆ ಎಂದು ಯಾವ ಉದ್ದೇಶಕ್ಕಾಗಿ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

ವಾದಿ ದಾವಾ ಆಸ್ತಿಯ ಮೂಲ ಪತ್ರಗಳನ್ನು 1 ನೇ ಪ್ರತಿವಾದಿಗೆ ನೀಡಿದ್ದಾರೆ ಎಂದು

ಕ್ರಯಪತ್ರದಲ್ಲಿ ನಮೂದಾಗಿದೆ ಎಂದರೆ ಸರಿ 1 ನೇ ಪ್ರತಿವಾದಿ ವಾದಿಗೆ ಕ್ರಯ ಪತ್ರ ಬರೆದುಕೊಡುವಂತೆ ಒತ್ತಾಯಪಡಿಸಿರುತ್ತಾರೆ ಎಂದು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರ ಸುಳ್ಳಿನಿಂದ ಕೂಡಿರುತ್ತದೆ . ನನ್ನ ಸಾಕ್ಷ್ಯಪ್ರಮಾಣ ಪತ್ರದ ಪ್ಯಾರಾ 19 ರಲ್ಲಿ ವಾದಿಯೇ ನಮಗೆ ನೀವೇ ಕ್ರಯ ಪತ್ರ ಮಾಡಿಸಿಕೊಳ್ಳುವಂತೆ ತಿಳಿಸಿರುತ್ತಾರೆ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯ ಪತ್ರದ ದಿನದಂದು ನಾನು ಆ ಸ್ಥಳದಲ್ಲಿಯೇ ಇದ್ದೆನು. ಆ ಕ್ರಯ ಪತ್ರ ಆದ ನಂತರ ನಾನು ಮತ್ತು 1 ನೇ ಪ್ರತಿವಾದಿ ಯಾವ ದಿನಾಂಕದಂದು ಪಂಚಾಯಿತಿಗೆ ಹೋದೆವು ಎಂಬುದು ನನಗೆ ಈಗ ನೆನಪಿಲ್ಲ. ಈ ಬಗ್ಗೆ ಗ್ರಾಮ ಪಂಚಾಯಿತಿಗೆ ಅರ್ಜಿ ಸಲ್ಲಿಸಿರುತ್ತೇವೆ. ಆ ಅರ್ಜಿಯನ್ನು ನಿವೇಶನ ಅನುಮೋದನೆ ಕೋರಿ ಸಲ್ಲಿಸಿರುತ್ತೇವೆ. ಆ ಎಲ್ಲಾ ಅರ್ಜಿಗಳಿಗೂ 1 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ. ಆ ಕ್ರಯ ಪತ್ರದ ವೇಳೆ ಮತ್ತು ಪಂಚಾಯಿತಿಗೆ ಅರ್ಜಿ ಸಲ್ಲಿಸುವ ಸಮಯದಲ್ಲಿ ವಾದಿ ಆ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಾನು ಆ ನಿವೇಶನ ಅನುಮೋದನೆ ಮಾಡುವಂತೆ ಕೋರಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿಯವರ ಬಳಿ ಹೋಗಿದ್ದೆನು. ಈ ಬಗ್ಗೆ 1 ನೇ ಪ್ರತಿವಾದಿಯೇ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಅರ್ಜಿ ಸಲ್ಲಿಸಿರುತ್ತಾರೆ. ಆ ಸಮಯದಲ್ಲಿಯೂ ಸಹ ವಾದಿ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ಮುಂದೆ ಹಾಜರಿದ್ದರು. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಂದೆ ವಾದಿ ಹಾಜರಿದ್ದು, ಆ ಅರ್ಜಿಗಳಿಗೆ ತನ್ನ ಸಮ್ಮತಿ ಸಹಿಗಳನ್ನು ಮಾಡಿರುತ್ತಾರೆ. ಈ ಬಗ್ಗೆ

ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ವಿಚಾರ ವಾದಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೋಸ್ಕರ ಪ್ಯಾರಾ ನಂ. 20ರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಈ ಎಲ್ಲಾ ವಿಚಾರ ವಾದಿಗೆ ಗೊತ್ತು ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಹೆಸರಿಗೆ ಕ್ರಯ ಪತ್ರ ಆದ ನಂತರ 2 ನೇ ಪ್ರತಿವಾದಿಗೆ ದಾನ ಪತ್ರ ಆಗುವವರೆಗೆ ನಿವೇಶನದ ಯಾವುದೇ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ಯಾವುದೇ ಮಾಹಿತಿ ಕೊಡದೇ 1 ನೇ ಪ್ರತಿವಾದಿ ದಾವಾ ಆಸ್ತಿಯ ಕ್ರಯ ಪತ್ರವನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ ಆ ಕ್ರಯ ಪತ್ರದಂತೆ 1 ನೇ ಪ್ರತಿವಾದಿಗೆ ಯಾವುದೇ ಹಣ ನೀಡಿರುವುದಿಲ್ಲ ಮತ್ತು ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ 2 ನೇ ಪ್ರತಿವಾದಿ ದಾನ ಪತ್ರ ಬರೆಯುವ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ